**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವನಹಳ್ಳಿ**

**ಉಪಸ್ಥಿತರು:** ಶ್ರೀ ಸಂದೇಶ.ಕೆ., ಎಂ.ಎ.,ಎಲ್‌ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು,
ದೇವನಹಳ್ಳಿ.

**2021 ನೇ ಇಸವಿ, ಡಿಸೆಂಬರ್ 23 ನೇ ತಾರೀಖು**

<u>ಅಸಲು ದಾವಾ ಸಂಖ್ಯೆ:**559/2007**</u>

**ವಾದಿ/ಯರು:** ಶ್ರೀಮತಿ. ಮಹದೇವಮ್ಮ ಯಾನೆ ಸಿ ವಾಣಿ

**-ವಿರುದ್ಧ-**

**ಪ್ರತಿವಾದಿ/ಯರು:** ಶ್ರೀರಾಮಪ್ಪ ಮತ್ತು ಇತರರು

**<u>ಮಧ್ಯಂತರ ಅರ್ಜಿ-7 ರ ಪಕ್ಷಕಾರರು</u>**

**ಅರ್ಜಿದಾರ/**
**4 ಮತ್ತು 5 ನೇ ಪ್ರತಿವಾದಿ :** ಶ್ರೀಮತಿ. ಅಕ್ಕಯಮ್ಮ ಮತ್ತು ಇನ್ನೊಬ್ಬರು

**-ವಿರುದ್ದ-**

**ಎದುರುದಾರರು/**ವಾದಿ : ಶ್ರೀಮತಿ. ಮಹದೇವಮ್ಮ ಯಾನೆ ಸಿ ವಾಣಿ

<u>4 ಮತ್ತು 5 ನೇ ಪ್ರತಿವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ-7 ದಿವಾನಿ ಪ್ರಕ್ರಿಯಾ ಸಂಹಿತೆ ಕಲಂ 151 ರ ಮೇಲೆ ಆದೇಶ</u>

ಪ್ರತಿವಾದಿ ಪ್ರಸ್ತುತ ಮಧ್ಯಂತರ ಅರ್ಜಿ 7 ನ್ನು ದಿವಾನಿ ಪ್ರಕ್ರಿಯಾ ಸಂಹಿತೆ ಕಲಂ 151 ರಡಿಯಲ್ಲಿ ಅರ್ಜಿ ಸಲ್ಲಿಸಿ, 4 ಮತ್ತು 5 ನೇ ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

**<u>ಅರ್ಜಿಯ ಸಂಕ್ಷಿಪ್ತ ಸಾರಾಂಶವು ಈ ಕೆಳಗಿನಂತಿದೆ:</u>**

2.ಅರ್ಜಿದಾರರು/ ಪ್ರತಿವಾದಿ ತನ್ನ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸಿರುವಂತೆ, ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ದ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗ ಮತ್ತು ಪ್ರತ್ಯೇಕ ಹಿಸ್ಸೆ ಕೋರಿ ದಾವೆ ಸಲ್ಲಿಸಿರುತ್ತಾರೆ. 4 ಮತ್ತು 5 ನೇ ಪ್ರತಿವಾದಿಯರ ವಕೀಲರು ದಾವಾ ಸ್ವತ್ತಿಗೆ ಸಂಬಂದಿಸಿದಂತೆ ದಾಖಲೆಗಳನ್ನು ನೀಡಲು ತಿಳಿಸಿರುತ್ತಾರೆ. ಆದರೆ ದಾಖಲೆಗಳು ನಿಗದಿತ ಸಮಯದಲ್ಲಿ ದೊರೆತಿರುವುದಿಲ್ಲ. ತದನಂತರದಲ್ಲಿ ಸಂಬಂದಪಟ್ಟ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದು, ಅವುಗಳನ್ನು ಪಡೆದು ಕೊಳ್ಳುವುದು ಕಷ್ಟಕರವಾಗಿರುತ್ತದೆ. ತದನಂತರ ವಕೀಲರಿಗೆ ಮಾಹಿತಿ ನೀಡಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸುವಂತೆ ಕೋರಿಕೊಂಡಿರುತ್ತಾರೆ.

3. ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿನ್ನು ವಿರೋಧಿಸಿ 7 ನೇ ವಾದಿಯು ನಿಗದಿತ ಸಮಯದಲ್ಲಿ ತಕರಾರು ಸಲ್ಲಿಸದ ಕಾರಣ ಮಧ್ಯಂತರ ಅರ್ಜಿಗೆ ಯಾವುದೇ ತಕರಾ ಇಲ್ಲ ಎಂದು ಪರಿಗಣಿಸಲಾಗಿರುತ್ತದೆ.

4. 4 ಮತ್ತು 5 ನೇ ಪ್ರತಿವಾದಿಯ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

5. ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರ್ಯಾಲೋಚನೆಗೆ ಉದ್ಭವಿಸುತ್ತವೆಃ

**1. ಪ್ರತಿವಾದಿ ಸಲ್ಲಿಸಿರುವ ಮದ್ಯಂತರ ಅರ್ಜಿ-7 ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಕಲಂ 151 ನ್ನು ಪುರಸ್ಕರಿಸಲು ಯಾೋಗ್ಯವೇ?**

**2. ಏನು ಆದೇಶ?**

**6.** ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನ್ಯಾಯಾಲಯದ ಉತ್ತರಗಳು ಈ ಕೆಳಗಿನಂತಿವೆಃ

**ಅಂಶ 1 ಃ ಸಕಾರಾತ್ಮಕ**

**ಅಂಶ 2 ಃ ಅಂತಿಮ ಆದೇಶದಂತೆ**

## **ಕಾರಣಗಳು**

7. **ಅಂಶ-1:** ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ದ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ವಿಭಾಗ ಮತ್ತು ಪ್ರತ್ಯೇಕ ಹಿಸ್ಸೆ ಕೋರಿ ದಿನಾಂಕಃ 24-11-2007 ರಂದು ದಾವೆ ಸಲ್ಲಿಸಿರುತ್ತಾರೆ. ತದನಂತರದಲ್ಲಿ ಪ್ರತಿವಾದಿಯರಿಗೆ ಸಮನ್ಸ್ ಜಾರಿ ಮಾಡಿದ್ದು, 1 ರಿಂದ 10ನೇ ಪ್ರತಿವಾದಿಯರಿಗೆ ದಿನಾಂಕಃ 23-02-2008 ರಂದು ಜಾರಿಯಾಗಿರುತ್ತದೆ. 4 ಮತ್ತು 5ನೇ ಪ್ರತಿವಾದಿಯುರು ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಸದರಿಯವರ ವಿರುದ್ದ ಏಕತರ್ಫೆ ಆದೇಶವನ್ನು ಮಾಡಲಾಗಿರುತ್ತದೆ. ತದನಂತರದಲ್ಲಿ ದಿನಾಂಕಃ 05-01-2018 ರಂದು 4 ಮತ್ತು 5ನೇ ಪ್ರತಿವಾದಿಯು ನ್ಯಾಯಾಲಯುದ ಮುಂದೆ ಹಾಜರಾಗಿ ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 9 ನಿಯಮ 7 ಸಹಕಲಂ 151 ರ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯು ಪುರಸ್ಕರಿಸಿದ್ದು, ಪ್ರತಿವಾದಪತ್ರ ಸಲ್ಲಿಸದ ಕಾರಣ ಪ್ರತಿವಾದ ಪತ್ರ ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ. ತದನಂತರ 4 ಮತ್ತು 5ನೇ ಪ್ರತಿವಾದಿಯರು ದಿನಾಂಕಃ 11-09-2018 ರಂದು ನ್ಯಾಯಾಲಯದ ಮುಂದೆ ಹಾಜರಾಗಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ವಿರೋಧಿಸಿ ವಾದಿಯು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ.

08. ಈಗಾಗಲೇ ತಿಳಿಸಿರುವಂತೆ ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ದ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ವಿಭಾಗ ಮತ್ತು ಪ್ರತ್ಯೇಕ ಹಿಸ್ಸೆ ಕೋರಿ ದಾವೆ ಸಲ್ಲಿಸಿರುತ್ತಾರೆ. ದಾವೆಯನ್ನು ವಾದಿಯು 2007 ರಲ್ಲಿ ಸಲ್ಲಿಸಿದ್ದರು ಸಹ 4 ಮತ್ತು 5ನೇ ಪ್ರತಿವಾದಿಯರು 2018 ರಲ್ಲಿ ತನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಸ್ಕರಿಸುದರಿಂದ ವಾದಿಗೆ ಯಾವುದೇ ರೀತಿಯ ನಷ್ಟ ಉಂಟಾಗುವುದಿಲ್ಲ. ಒಂದು ವೇಳೆ ಅರ್ಜಿಯನ್ನು ಪುರಸ್ಕರಿಸದೇ ಹೋದರೆ ದ್ವಿವವಹರಣೆಗಳಿಗೆ ದಾರಿ ಮಾಡಿಕೊಟ್ಟಂತೆ ಆಗುತ್ತದೆ ಹಾಗೂ ಸರಿಯಾಗಿ ಅಂತಿಮ ತೀರ್ಮಾನ ಮಾಡಲು ಸಾದ್ಯವಿರುವುದಿಲ್ಲ. ಈಗಾಗಲೇ ದಾವೆಯು ತುಂಬಾ ಹಳೆಯದಾಗಿರುವುದರಿಂದ ಅರ್ಜಿಯನ್ನು ಪುರಸ್ಕರಿಸವುದು ಊರ್ಜಿತವಾಗಿರುತ್ತದೆ. ಹಾಗೂ ದಾವೆಯಲ್ಲಿನ ನಿಜವಾದ ಪ್ರಶ್ನೇಯನ್ನು

ಹೊರ ತೆಗೆಯಲು ಪ್ರತಿವಾದ ಪತ್ರವು ಅವಶ್ಯಕತೆ ಇರುತ್ತದೆ. ಅಲ್ಲದೇ ವಾದಿಯು ಸದರಿ ಅರ್ಜಿಯನ್ನು ವಿರೋಧಿಸಿ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ.

09. ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 8 ನಿಯಮ 1 ರಲ್ಲಿ ಪ್ರತಿವಾದಪತ್ರವನ್ನು ಸಮನ್ಸ್ ಜಾರಿಯಾದ 30 ದಿನಗಳ ಒಳಗೆ ಸಲ್ಲಿಸಬೇಕೆಂದು ತಿಳಿಸಿರುತ್ತದೆ. ಅದರೆ 4 ಮತ್ತು 5 ನೇ ಪ್ರತಿವಾದಿಯರ ವಿರುದ್ದ ಏಕತರ್ಪೆ ಆದೇಶವಾದ ನಂತರದಲ್ಲಿ ಸದರಿ ಏಕತರ್ಪೆ ಆದೇಶವನ್ನು ತೆರವುಗೋಳಿಸಿ ತದನಂತರದಲ್ಲಿ ಪ್ರತಿವಾದ ಪತ್ರ ಸಲ್ಲಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಅಲ್ಲದೇ ದಾವೆಯನ್ನು ಪರಿಣಾಮಕಾರಿಯಾಗಿ ತೀರ್ಮಾನ ಮಾಡಲು ಪ್ರತಿವಾದ ಪತ್ರದ ಅವಶ್ಯಕತೆ ಇರುತ್ತದೆ. ಆದ್ದರಿಂದ **ಅಂಶ 1 ಸಕರಾತ್ಮಕ ಎಂದು ಉತ್ತರಿಸಲಾಗಿದೆ.**

**<u>10.ಅಂಶ-2</u>**: ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ನ್ಯಾಯಾಲಯ ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

## <u>ಆದೇಶ</u>

4 ಮತ್ತು 5 ನೇ ಪ್ರತಿವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ-7 ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 151 ರ ಅರ್ಜಿಯನ್ನು ರೂ. 3,000/- ಗಳ ಖರ್ಚು ಸಹಿತ ಪುರಸ್ಕರಿಸಲಾಗಿದೆ.

4 ಮತ್ತು 5 ನೇ ಪ್ರತಿವಾದಿಯರ ಪ್ರತಿವಾದ ಪತ್ರವನ್ನು ಕಡತದಲ್ಲಿ ಅಳವಡಿಸಿ, ಪ್ರತಿವಾದ ಪತ್ರವನ್ನು ಪರಿಗಣಿಸಲಾಗಿರುತ್ತದೆ.

(ಈ ಆದೇಶವನ್ನು ಶೀಘ್ರಲಿಪಿಗಾರಿನಿಗೆ ಉಕ್ತಲೇಖನ ಕೊಟ್ಟು, ಅವರು ಗಣಿಕೀಕೃತಗೋಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ ದಿನಾಂಕ: 23 ನೇ ಡಿಸೆಂಬರ್ 2021 ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ).

**(ಸಂದೇಶ.ಕೆ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ,ದೇವನಹಳ್ಳಿ .

**ವಿವರವಾದ ಪ್ರತ್ಯೇಕ ಆದೇಶವನ್ನು ಪ್ರಕಟ ಮಾಡಿದ್ದು, ಅಂತಿಮ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು**

**ಆದೇಶ**

4 ಮತ್ತು 5 ನೇ ಪ್ರತಿವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ-7 ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 151 ರ ಅರ್ಜಿಯನ್ನು ರೂ. 3,000/- ಗಳ ಖರ್ಚು ಸಹಿತ ಪುರಸ್ಕರಿಸಲಾಗಿದೆ.

4 ಮತ್ತು 5 ನೇ ಪ್ರತಿವಾದಿಯರ ಪ್ರತಿವಾದ ಪತ್ರವನ್ನು ಕಡತದಲ್ಲಿ ಅಳವಡಿಸಿ, ಪ್ರತಿವಾದ ಪತ್ರವನ್ನು ಪರಿಗಣಿಸಲಾಗಿರುತ್ತದೆ.

The written statement of defendant No.4 and 5 taken on record.

For Issues by 20-01-2022.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ,ದೇವನಹಳ್ಳಿ .